ಶ್ರೀ ಜಿ. ರಾಮೇಗೌಡ.—ಸ್ವಾಮಿ, ಈ ಸಂಖ್ಯೆಯ ವಿಚಾರವಾಗಿ ಹೇಳುವುದಾದರೆ, ಇದು ಆಹುದಾದರೆ ಆಹುದೆನ್ನಿ, ಇಲ್ಲವಾದರೆ ಇಲ್ಲವೆನ್ನಿ, ಆದರೆ ಬಹು ಜನರು ಹೇಳುವ ಮಾತು ಇದು. ಆದರಂತೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಧಿಕಾರಿಗಳನ್ನು ಕಳಿಸಿದ್ದೇನೆ. ನಿಜಾಂಶವನ್ನು ಜಾಗ್ರತೆಯಾಗಿ ತಿಳಿದು ಅಲ್ಪೇನಾದರೂ ಕಾಡುಪ್ರಾಣಿಯಿದ್ದರೆ ತಕ್ಕ ಬಂದೋಬಸ್ತನ್ನು ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

ಶ್ರೀ ಬೆಟ್ಟಸ್ವಾಮಿಗೌಡ.—ಸ್ವಾಮಿ, ಈಗ ಈ ನಷ್ಟ ಅನುಭವಿಸಿರತಕ್ಕ ಸುತ್ತಮುತ್ತಲಿನ ಗ್ರಾಮದವರಿಗೆ ಸೂಕ್ತವಾದ ಪರಿಹಾರವನ್ನು ಕೊಡುವುದಾಗಿ ಈಗತಾನೇ ಹೇಳಿಕೆಯಲ್ಲಿ ಹೇಳಿದ್ದೀರಿ. ಆದರೆ ಅದನ್ನು ಯಾವಾಗ ಕೊಡುತ್ತಾರೆ, ಎಷ್ಟು ಕೊಡುತ್ತಾರೆ, ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ.—ಇದರ ಬಗ್ಗೆ ಇದುವರೆಗೂ ಒಂದು ಅರ್ಜಿಯೂ ಬಂದಿಲ್ಲ. ಅರ್ಜಿಗಳು ಬಂದಕೂಡಲೇ ಸತ್ತಿರುವ ದನಗಳ ಬೆಲೆಯುಮೇಲೆ ಪರಿಹಾರವನ್ನು ಕೊಡುವ ಏರ್ಪಾಡು ಮಾಡಲಾಗುವುದು. ಡಿ.ಎಫ್.ಓ. ಅವರಿಗೆ ೨೫೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೫೦೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೧ ಸಾವಿರ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ನಷ್ಟ ಯಾವರೀತಿಯಾಗಿದೆ ಎಂಬುದನ್ನು ಪರೀಕ್ಷೆ ಮಾಡಿ ಪಾವತಿ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಅದರ ಪ್ರಕಾರ ತನಿಖೆ ಮಾಡಿ ಯಾವ ಯಾವ ಅರ್ಜಿ ಬರುತ್ತದೋ ಅದರ ಬಗ್ಗೆ ತಡವಿಲ್ಲದೇ ತಕ್ಷಣ ಪರಿಹಾರ ನೀಡುವಂತೆ ಏರ್ಪಾಡು ಮಾಡುತ್ತೇನೆ.

Re :—Allotment of land reserved for playground to Private Management.

ಶ್ರೀ ಎಂ. ಚಂದ್ರಶೇಖರ್.—ಜಮೀನು ಅಲಾಟ್ ಆಗಿರುವುದನ್ನು ಕ್ಯಾನ್ಸಲ್ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು.—ಇದು ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟಿದ್ದು. ಅವರು ಈಗ ಇಲ್ಲ.

ಶ್ರೀ ಎಂ. ಚಂದ್ರಶೇಖರ್. —ಮಾನ್ಯಮಂತ್ರಿಗಳೇ ಆಶ್ವಾಸನೆ ಕೊಟ್ಟರೆ ಸಾಕು.

SRI D. DEVARAJ URS.—Unless I know whether it is illegal or whether is unnecessary interference, how can I give a promise?

MR. SPEAKER.—I withhold it.

SRI D. DEVARAJ URS.—Let him write to me what exactly is the position and I shall look into it.

10-30 A. M.

(*iii*) *re: arrest of workers of Mysore metal and wire factory Bangalore*

SRI B. V. KAKKILAYA (Vittal).—I call the attention of the Chief Minister to the arrest of 50 workers of Mysore Metal and Wire Factory, Bangalore.

SRI D. DEVARAJ URS (Chief Minister).—I wish to make the following Statement:

The Mysore Wire and Metal Industries Factory is located at Tumkur Road, Bangalore. The workers numbering about 80 are on strike since 30-7-78, following the termination of an employees by

name Ramakrishnaiah who was involved in an accident outside the factory resulting in the amputation of one of his legs. They are also demanding discontinuance of contract labour and to make casual workers permanent. On 4-8-78, the striking workers obstructed the supervisory staff from attending work. On the complaint of the Supervisory staff, a case in Cr. No. 602/78 u/s 143, 341, 506 IPC has been registered in Yeswanthapur Police Station and is under investigation.

On 5-8-1978 fornoon, the workers tookout a procession to Vidhana Soudha. On the way they pelted stones at the Registered Office at Malleswaram and damaged the glass panes and assulted the Watchman. In this connection a case in Cr. No. 524/78 u/s 143, 426, 323 IPC has been registered in Malleswaram Police Station and is under investigation. On the same day at about 6 p. m. while Sri Pai, the works Manager was leaving the factory in a car, he was stopped by the workers and one of them got on the bonnet. On the complaint of Shri Pai, a case in Cr. No. 609/78 u/s 341 IPC has been registered in Yeswanthapur Police Station and is under investigation.

On 5-8-1978, Government prohibited the continuance of strike and referred the matter for adjudication as per Section 10 of the Industries Disputes Act. But the workers continued the strike.

On 7-8-1978, at about 9-30 A. M. the management wanted to remove some finished goods urgently. They brought Lorry No. MYS 3934. About 50 workers who wert at the gate, obstructed the vehicle. The Sub Inspector of Police (Crime), Yeswanthapur Police Station who was on duty at the spot requested the not to obstruct. He also brought to the notice of the workers about the prohibition of the strike by the Government. The workers started pelting stones The Police at the spot arrested 42 persons including Sri Baba Mathew. A case in Cr. No. 813/78 u/s 143, 341, 426 and 506 IPC was registered in Yeswanthapur Police Station. The accused were produced before the Chief Judicial Magistrate Bangalore, who remanded them to Judicial custody till 9-8-1978. Sri Baba Mathew had come in a car to the scene. He handover the key to the Circle Inspector of Police to be handedover to his representative when he came there. Accordingly Sri Hari Govind, Trade Union workers took away the car.

Thereafter, some of the workers rushed inside the factory from the eastern side and started pelting stones on the lorry. The glass panes of the lorry were damaged. A Mazdoor of the lorry was also injured by the stone hit. In this connection, a case in Cr. No. 614/78 u/s 427, 324 r/w 34 IPC has been registered in Yeswanthapur Police Station and is under investigation.

Thereafter, at about 11-30 A. M. When the Crime Sub-Inspector of Yeswanthapur Police Station was returning to the Police Station to attend Court near Deepak Cable factory, a few workers started pelting stone on the police and the S. I. of police hss sustained injury on the leg. In this connection. a case in Cr. No. 615/78 u/s 143, 147, 148, 353, 149 IPC has been registered at Yeswanthapur P. S. and is under investigation. The car of the management bearing No. MEM-2777 was also damaged due to stone throwing-All the glass panes have been broken. Investigation in all these cases is completed and final report will be placed before the court during next week. As the workers are still threatening the management. police bando bust is kept near the factory.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್‌ನ್ನು ಓದಿದ್ದಾರೆ. ಇದರಲ್ಲಿ ೫ನೇ ಆಗಸ್ಟ್ ೧೯೭೮ರ ದಿವಸ ಸ್ಟೈಕ್ ಪ್ರೊಹಿಬಿಟ್ ಮಾಡಿದರು. ಅಲ್ಲಿ ಏನು ನಡೆದಿದೆ ಅದನ್ನು ತಮ್ಮ ವರದಿಯಲ್ಲಿ ಹೇಳಲಿಲ್ಲ. ಅಲ್ಲಿ ಒಬ್ಬ ಕೆಲಸಗಾರನಿಗೆ ಕಾಲು ಇರಲಿಲ್ಲ. ಅಲ್ಲಿ ಕಾಲು ಇಲ್ಲದೇ ಹೋದರೂ ಕೆಲಸ ಮಾಡಬಹುದು. ಇ.ಎಸ್.ಐ. ನಲ್ಲಿ ಫಿಟನೆಸ್ ಕೊಟ್ಟಿದ್ದಾರೆ. ಇ.ಎಸ್.ಐ. ನವರು ಫಿಟನೆಸ್ ಸರ್ಟಿಫಿಕೇಟ್ ಕೊಟ್ಟಿರುವ ಬಗ್ಗೆ ತಮ್ಮ ವರದಿಯಲ್ಲಿ ಹೇಳಿಲ್ಲ, ಮತ್ತು ಆತನಿಗೆ ಕೆಲಸ ಕೊಟ್ಟಿಲ್ಲ. ಆದುದರಿಂದ ವಿವಾದ ಉದ್ಭವವಾಗಿದೆ. ಇದನ್ನು ತನಿಖೆ ಮಾಡುವುದರ ಬದಲು ದಿನಾಂಕ ೫ನೇ ಆಗಸ್ಟ್ ೧೯೭೮ ರಂದು ಸ್ಟೈಕ್‌ನ್ನು ಪ್ರೊಹಿಬಿಟ್ ಮಾಡಿದರು. ಸ್ಟೈಕ್‌ನ್ನು ಪ್ರೊಹಿಬಿಟ್ ಮಾಡಿದಮೇಲೆ ೭ನೇ ತಾರೀಖಿನ ದಿವಸ ಬೆಳಿಗ್ಗೆ ಕೆಲಸಕ್ಕೆ ಹೇಗೆ ಹೋಗುವುದು ಎಂದು ಇದರ ಬಗ್ಗೆ ತೀರ್ಮಾನ ಮಾಡುವುದಕ್ಕೋಸ್ಕರ ಕೆಲಸಗಾರರು ಫ್ಯಾಕ್ಟರಿ ಗೇಟ್‌ನಲ್ಲಿ ಸಭೆ ಸೇರಿದರು. ಆಗ ಯಾವುದೇ ತಕರಾರು ಆಗಿರಲಿಲ್ಲ. ಉತ್ತರದಲ್ಲಿ ತಾವು ಹೇಳಿದಹಾಗೆ, ಬಾಬಾ ಮ್ಯಾಥ್ಯು ಅವರು ಅಡ್ವೋಕೇಟ್ ಆಗಿದ್ದಾರೆ, ಯೂನಿಯನ್ ಮುಖಂಡರು ಕೂಡ ಆಗಿದ್ದಾರೆ. ಅವರು ಅಲ್ಲಿಗೆ ವರ್ಕ್‌ಸ್ ಸ್ಟೈಕ್‌ನ್ನು ಪರ್ಸುಯೇಡ್ ಮಾಡಲಿಕ್ಕೆ ಹೋಗಿದ್ದಾರೆ. ಅವರು ಅಲ್ಲಿದ್ದ ತಮ್ಮ ಕಾರಿನ ಬೀಗದ ಕೈಯನ್ನು ಕೊಟ್ಟಿದ್ದಾರೆ, ಗಲಾಟೆ ಮಾಡಂಥ ಉದ್ದೇಶ ಇದ್ದಿದ್ದರೆ ಈ ರೀತಿ ಮಾಡುತ್ತಾ ಇರಲಿಲ್ಲ, ಅವರು ಪರ್ಸುಯೇಡ್ ಮಾಡುತ್ತಾ ಇದ್ದರು. ಆ ಸಮಯದಲ್ಲಿ ಪೈವ್ವೋಕ್ ಮಾಡಿದ್ದಾರೆ, ಲಾಟಿಜಾರ್ಜ್ ಮಾಡಿದ್ದಾರೆ ೫೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಆ ಲಾಯರನ್ನು ಅರೆಸ್ಟ್ ಮಾಡಿದ್ದಾರೆ. ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಮುಂದೆ ಇವರನ್ನು ತೆಗೆದುಕೊಂಡು ಹೋಗಿದ್ದಾಗ, ಅಲ್ಲಿ ಬೇಲ್ ಮೇಲೆ ಹೊರಗಡೆ ಬಿಡುವುದಿಲ್ಲ ಎಂದು ಹೇಳಿದರು. ನಂತರ ೨ ದಿವಸ ಆದಮೇಲೆ ಬೇಲ್ ಮೇಲೆ ಇವರು ಹೊರಗಡೆ ಬಂದಿದ್ದಾರೆ. ಅಲ್ಲಿ ೧೧-೩೦ ಗಂಟೆಗೆ ಏನೋ ಗಲಾಟೆಯಾಗಿದೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಪೋಲೀಸರು ತಮ್ಮಗೆ ಕಾರ್ಮಿಕರು ಬಹಳ ಗಲಾಟೆ ಮಾಡಿಬಿಟ್ಟಿದ್ದಾರೆ ಎಂದು ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ವರದಿಯನ್ನು ಕಳಿಸಿದ್ದಾರೆ. ಈ ರೀತಿ ವರದಿಯನ್ನು ಕೊಟ್ಟಂತೆ ಅಧಿಕಾರಿಗಳು ಷಾ ಕಮಿಷನ್ ಮುಂದೆ ಸುಳ್ಳು ರಿಕಾರ್ಡ್‌ಗಳನ್ನು ಇಟ್ಟು ಆಡ್ಜರ್ಸ್ ಮಾಡಿರುವಂತೆ ತಮಗೆ ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನನಗೆ ಪರಿಚಯವಿರುವುದರಿಂದ ನಾನು ಹೇಳುತ್ತಾ ಇದ್ದೇನೆ. ಇಂತಹ ವರದಿಗಳನ್ನು ಅಧಿಕಾರಿಗಳು ಏನು ಕೊಡುತ್ತಾರೆ ಇದರ ಬಗ್ಗೆ ತಾವು ದಯವಿಟ್ಟು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕು. ಕೆಲಸಗಾರರು ಸಭೆ ನಡೆಸಿದರೆ ಎಲ್ಲಾ ಕಡೆಯಲ್ಲೂ ಈ ರೀತಿ ಮಾಡುತ್ತಾರೆ ಎಂದರೆ ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳು ತಮಗೆ ಸುಳ್ಳು ಸುಳ್ಳು ವರದಿಯನ್ನು ಕಳಿಸುತ್ತಾರೆ. ಇದರ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಬೇಕು ಎಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್,—ತಾವು ಹೇಳಿದ್ದರ ಬಗ್ಗೆ ತನಿಖೆ ನಡೆಸೋಣ. ಆದರೆ ಶ್ರೀಮಾನ್ ಕಕ್ಕಿಲಾಯರವರಿಗೆ ಗೊತ್ತಾಗಿದ್ದು ಯಾರಿಂದ ? ಬೇರೆಯವರು ಹೇಳ್ಕವ ವರದಿಯ ಮೇಲೆ ನೀವು ಹೇಳುತ್ತೀರೇ ಹೊರತು. You are also not a eye-witness to what was going on. ವರ್ಕ್‌ಸ್ ರೆಪ್ರೆಸೆಂಟ್ ಮಾಡುವುದೆಲ್ಲಾ ಸರಿ ಎಂಬುದಾಗಿ ಧೈರ್ಯವಾಗಿ ಹೇಳಿಬಿಡಿ. It is also stated that when the lorry was to go inside, 50 workers damaged the lorry and have thrown stones.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಪರ್ಟಿಕ್ಯುಲರ್ ವಿಷಯದಲ್ಲಿ ಮಾತ್ರ ನಾನು ಹೇಳಿದ್ದು.

ಶ್ರೀ ಡಿ. ದೇವರಾಜ ಅರಸ್.—ಸುಮ್ಮಸುಮ್ಮನೆ ಲಾಠಿಚಾರ್ಜ್ ಮಾಡುವುದಕ್ಕೆ ಅವರಿಗೇನು ಹುಚ್ಚು ಹಿಡಿದಿದೆಯೇ ? ಸುಮ್ಮನೆ ಇದ್ದರೆ ಪೋಲೀಸ್ ಆಕ್ಟ್ ಹೂಡಿಲ್ಲ ಎಂಬುದಾಗಿ ಹೇಳುತ್ತೀರ. ಅವರು ಆಕ್ಟ್ ಮಾಡಿದರೆ ಸುಮ್ಮಸ್ಮನೆ ಹೊಡೆದರು ಎಂಬುದಾಗಿ ಮಾತನಾಡುತ್ತೀರಿ. Let us not go by all these things. If the hon'ble member has any suspicion that the Police have tried to bring in a report which is not true to facts, I shall certainly look into it. But let him not not swear by what the workers themselves might have represented to him. ನಾನು ಕಲ್ಲು ಹೊಡೆದೆ, ಗಾಜು ಹೊಡೆದುಹಾಕಿದೆ ಎಂಬುದಾಗಿ ಯಾರಾದರೂ ಹೇಳುತ್ತಾರಾ ? ಸುಮ್ಮನೆ ಇದ್ದೆ ಸ್ವಾಮಿ, ಬಂದು ಹೊಡೆದರು ಎಂಬುದಾಗಿ ಹೇಳುತ್ತಾರೆ. Anyhow now that the hon'ble member suspect the bona fide of the Circle Inspector or Sub-Inspector, whoever it is, I shall look into the matter and find out what exactly is the position. It was also stated that one worker by name Ramakrishnaiah who has lost his leg has a certificate that he is fit for work, but he has not been entertained. I do not know whether he has represented the matter previously to the Labour Commissioner. Bnt inspite of the representatiou, if his representation has not been cared for, I will look into into it. Il the hon'ble member knows anything about it, let him please let me know.

ಶ್ರೀ ಪಂಪಾಪತಿ.—ಇತ್ತೀಚೆಗೆ ಮಾಲೀಕರ ಹಾಗೂ ಕಾರ್ಮಿಕರ ನಡುವೆ ನಡೆಯುವಂಥ ವಿವಾದದಲ್ಲಿ ಕಾರ್ಮಿಕ ಇಲಾಖೆಯವರು ಮಧ್ಯ ಪ್ರವೇಶ ಮಾಡುವುದಕ್ಕಿಂತ ಮುಂಚೆ ಪೋಲೀಸಿನವರು ಲಾಠಿ ಚಾರ್ಜ್ ಮಾಡಿ, ಗಲಾಟೆ ಮಾಡಿ, ಗೊಂದಲ ಉಂಟು ಮಾಡತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಎಲ್ಲಿ ನೋಡಿದರೂ ಲಾಠಿಚಾರ್ಜ್.....

ಶ್ರೀ ಡಿ. ದೇವರಾಜ ಅರಸ್.—ಅವರ ಬೇಡಿಕೆ ಏನು ಎಂಬುದನ್ನು ಹೇಳುವುದಕ್ಕೆ ಮುಂಚಿತವಾಗಿ ಕಲ್ಲು ಹೊಡೆಯುವುದು. ತಲೆ ಹೊಡೆಯುವುದನ್ನು ಯಾಕೆ ಮಾಡುತ್ತೀರಿ ? ಸುಮ್ಮನೆ ಗಂಬೀರವಾಗಿರಬೇಕು. ನಾನು ಹೇಳುತ್ತೇನೆ ಕೇಳಿ. Sir, we are here to look after all those things. The Government is always sympathetic to the cause of workers, Let them not think that they are the only people who are interested in the workers. Sometimes they may know how to safeguard their interest and sometimes they may not know. But, Government is always there to look after all the interests of the workers and the working class, wherever it is justifiable. Sometimes they may also put high demands, and the Labour Department is there to look into it. The whole trouble is, they put up the demands and if they are not immediately agreed to, they begin to create trouble. This is because of Union rivalry—sometimes each Union wants to compete with the other in pitching the demand as high as the skies and they get nothing. Then they start throwing stones, and if that is done, Police certainly has to intervene. Is it the view of the hon'ble members that Police should not intervenne in such a situation ?

SRI B. V. KAKKILAYA.—The conciliation failed at the officers' level. Papers were sent by the Assistant Labour Commissioner, without giving an opportunity to the Union representatives to represent the matter to the higher officer.

SRI D. DEVARAJ URS.—Having allowed the Labour Commissioner to look into the matter, why did they go on strike ?

SRI B. V. KAKKILAYA.—The Assistani Labour Commissioner did not call them and discussed the matter. The matter could have been settled by him. Sir I appeal to Hon'ble Chief Minister to look into this particular matter and see that something is done.

SRI D. DEVARAJ URS.—As I have stated earlier, I have no prejudice. The hon'ble member has pointed out that so and so was involved, rather it is alleged to be so. Let me look into the matter, and if it is really so I will certainly see to it. Sir, but it is they who bring in extraneous matters and provoke me to talk all these things. Let them say here and now, the Police will never interfere in any way shall I do that ?

SRI S. R. BOMMAI.—Outside also there is provocation; here also there if provocation!

SRI D. DEVARAJ URS.—Sometimes the very labour leaders' life will be involved and the Police have to intervene There are many instances where the very workers turning hostile and turbulent against those who are leading them and they do not care even for the leaders because somebody else will provoke them. It is not as if the protection of Management that is involved, but sometimes even the Union Leaders' life is in danger—they always work in certain danger; they will be subjected to so many abuses.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಕಕ್ಕಿಲಾಯರುಮವರು ಎಲ್ಲ ವಿಚಾರಗಳನ್ನೂ ಹೇಳಿದ್ದಾರೆ. ಅದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ನಾವಿಬ್ಬರೂ ಯಾವುದಕ್ಕೂ ಐ ವಿಟ್‌ನಸ್ ಆಗಿಲ್ಲ. ಇದರಲ್ಲಿ ಎರಡು ಮುಖ್ಯ ವಿಚಾರಗಳಿವೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ, ಪೋಲೀಸಿನವರು ಆಲ್ಲಿ ಗಲಾಟೆ ಮಾಡಿದ ಮೇಲೆ ಬಂದು ಸರಿಪಡಿಸುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಮ್ಯಾನೇಜ್‌ಮೆಂಟಿನವರು ತೊಂದರೆಗಳನ್ನು ಉಂಟು ಮಾಡುತ್ತಾರೆ. ಮ್ಯಾನ್ ಪ್ರವೋಕೆ ಮಾಡುವುದಕ್ಕೆ ಗುಂಡಾಗಳನ್ನು ತರಿಸಿಕೊಂಡು. It is only to remsve the misunderstanding, I would like to ask what efforts is the Government making to ensure that the Managements do not engage rowdies and provoke workers and create violent sitution where the Police have to come and act ? Why should the Police be in charge of the operations even before the Labour Department is on the sence ? There are number of such instances. Will the Government take certain steps to ensure that violence is not provoked by the Management and the Police ?

SRI D. DEVARAJ URS.—I cannot agree with the suggestion that the Police are proveking violence but there is a force in what the hon'ble member says that there are occasions and occasions where the managements by their improver behaviour and intransigent attitude some time provoke the workers though it is not necessary. by not complying with certain reasonable things that they ought to comply and in

not meeting certain demands which they ought to meet; sometimes because they do not like a particular union, they provoke other set of people to form another union and allow it as a rival union. These are all provocations which they make. If by chance the Police Department were to intervene in the matter without being called and without the occasion demanding, then only I can take action against the Police. To make a generalisation and say that the police people are provoking, it is not fair and it is not correct.

Sometimes, you are aware, because of union rivalries things go bad; sometimes because of the fact that the management which they ought not to indulge and they indulge on account of which the things go bad. Therefore if there are instances where the police people have acted in a high-handed way or they have gone there without the occasion demanding their presence, then certainly you have every right to complaint and I must take action. In this particular case because there was stone-throwing, the police help was sought and that is why they are there. Even today if on behalf of the union they were to assure us that there is not going to be violence, this moment I will ask them to withdraw. There is going to be so much expenditure to government, why should I keep them there.

SRI S. S. ARKERI.—I would like to raise a matter under Rule 312 regarding the non-appointment of SCs and STs as Lecturers in the Mysore University.

MR. SPEAKER.—Yes.

Matters under Rule 312

(i) *re: Non-appointment of SC/ST candidates lecturers in Mysore University.*

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ರೂಲ್ ೩೧೨ರ ಕೆಳಗೆ ನಾನು ಒಂದೇ ಒಂದು ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಮೈಸೂರು ವಿಶ್ವವಿದ್ಯಾನಿಲಯ ಪುರಾತನವಾದುದು, ಪ್ರಸಿದ್ಧವಾದುದು ಹಾಗೂ ಐತಿಹಾಸಿಕವಾದುದು. ಇಂತಹ ವಿಶ್ವವಿದ್ಯಾನಿಲಯದಲ್ಲಿ ಅನೇಕ ಡಿಪಾರ್ಟ್‌ಮೆಂಟ್‌ಗಳಿವೆ. ಹಿಸ್ಟರಿ ಡಿಪಾರ್ಟ್‌ಮೆಂಟ್, ಪೊಲಿಟಿಕಲ್ ಸೈನ್ಸ್ ಡಿಪಾರ್ಟ್‌ಮೆಂಟ್, ಹೀಗೆ ಅನೇಕ ಡಿಪಾರ್ಟ್‌ಮೆಂಟ್‌ಗಳಿವೆ. ಇಲ್ಲಿ ಎಂ.ಎ. ಹಾಗೂ ಎಂ.ಎಸ್.ಸಿ. ಪಾಸ್ ಆದವರು ರೀಸರ್ಚ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಾರೆ. ಇಂತಹ ಪಾಸಾದವರ ಪೈಕಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳು ಸಹಾ ಇದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಅಲ್ಲಿನ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟಿನವರು ಏನು ಮಾಡುತ್ತಾರೆಂದರೆ, ತಮಗೆ ಬೇಕಾದವರನ್ನು ಅಂದರೆ ತಮ್ಮವರೇ ಆದಂಥ ವಿದ್ಯಾರ್ಥಿಗಳನ್ನು ಅಲ್ಲಿ ಲೆಕ್ಚರರ್ಸ್ ಆಗಿ ಕೆಲಸ ಮಾಡಲು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕ ಮಾಡಿಕೊಳ್ಳುತ್ತಾರೆ. ಇದು ಕಳೆದ ಎಷ್ಟೋ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇಂತಹ ಸಂದರ್ಭದಲ್ಲಿ ಹರಿಜನ ಗಿರಿಜನ ತಜ್ಞಾ ವಿದ್ಯಾರ್ಥಿಗಳಿದ್ದರೂ ಸಹ ಅವರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಕೇವಲ ತಮ್ಮ ಜಾತಿಯವರನ್ನು ಮಾತ್ರ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಕಾಲದ ನಂತರ ಅವರ ಸರ್ವೀಸನ್ನು ರಿಜಿಸ್ಟ್ರಾರ್ ಅವರಾಗಲೀ, ಇಲ್ಲವೇ ಉಪಕುಲಪತಿಗಳಾಗಲೀ ಖಾಯಂ ಮಾಡುತ್ತಾರೆ. ಇದರಿಂದ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲು ಸ್ಥಾನಗಳು ಸಿಗದೆ